**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.491/2025

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ನಾಗರಾಜ ಟಿ ಎಂ | ಸಿ.ಡಬ್ಲ್ಯು-18 |
| ತಂದೆಯ ಹೆಸರು | ತಿಮ್ಮಪ್ಪಯ್ಯ | ಪಿ .ಡಬ್ಲ್ಯೂ-6 |
| ವಯಸ್ಸು | 38 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಪಿ ಎಸ್ ಐ, ಹಾವೇರಿ ಶಹರ ಟೌನ್ ಪೋಲಿಸ್ ಠಾಣೆ | ದಿನಾಂಕಃ |
| ವಾಸಃ | ಸಾಗರ | 14.07.2026 |

**ಮುಖ್ಯ ವಿಚಾರಣೆ ವೀಡಿಯೋ ಕಾನ್ಫರೆನ್ಸ್ ಮೂಲಕಃ-ಎಪಿಪಿ ರವರಿಂದಃ**

**1.** ನಾನು ದಿನಾಂಕ 10.08.2023 ರಿಂದ 10.10.2025 ರವರೆಗೆ ಸಾಗರ ಟೌನ್ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

**2.** ದಿನಾಂಕ 24.09.2024 ರಂದು ಈ ಪ್ರಕರಣದ ಚಾ.ಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಪಡೆದು ಠಾಣಾ ಅಪರಾಧ ನಂಬರ್ 211/2024 ರಂತೆ ಪ್ರಕರಣವನ್ನು ನೊಂದಾಯಿಸಿಕೊಂಡು ಪ್ರ.ವ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾ.ಸಾ 19 ರವರಿಗೆ ಹಸ್ತಾಂತರಿಸಿರುತ್ತೇನೆ.

**3.** ನಿಪಿ-1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ಪ್ರ.ವ. ವರದಿಯನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಕೆ.ಹೆಚ್.ಎಸ್ ರವರಿಂದಃ-**

**1.** ದೂರನ್ನು ಸ್ವೀಕರಿಸುವಾಗ ಆರೋಪಿತನ ತಪ್ಪಿನಿಂದ ಅಪಘಾತವಾಗಿಲ್ಲ ಎಂದು ನನಗೆ ಮನವರಿಕೆ ಆಗಿದ್ದರೂ ಸಹ ಚಾ.ಸಾ 1 ರವರು ನೀಡಿದ ಸುಳ್ಳು ದೂರನ್ನು ಸ್ವೀಕರಿಸಿ ಚಾ.ಸಾ 1 ಹಾಗೂ ಮೃತನ ಕುಟುಂಬಕ್ಕೆ ಪರಿಹಾರ ಸಿಗಲೀ ಎಂದು ಸುಳ್ಳು ಪ್ರಕರಣವನ್ನು ನೊಂದಾಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.